**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**<u>ಸಿ. ಸಿ. ನಂ.914/2023</u>**

**<u>ಪಿರ್ಯಾಧಿದಾರರುಃ</u>** ಶ್ರೀ ಎಸ್ ರವಿಕುಮಾರ್ ಬಿ.ಎಸ್. ಬಿನ್ ಸಿದ್ದೇಗೌಡ, 49 ವರ್ಷ, ಕೇಬಲ್ ಮಾಲೀಕ ಮತ್ತು ವ್ಯಾಪಾರಿ, ವಾಸ ತಾ.ರಾ.ಸು. ರಸ್ತೆ, ಬಾಲ್ಗಡಿ, ಕೊಪ್ಪ-577126.

**-ವಿರುದ್ಧ -**

**<u>ಆರೋಪಿಃ</u>** ಶ್ರೀ ಶಕೀಲ್ ಅಹಮದ್ ಬಿನ್ ಶೇಖ್ ಅನ್ವರ್ ಸಾಬ್, 40 ವರ್ಷ, ವ್ಯಾಪಾರಿ, ವಾಸ ವಿವೇಕಾನಂದ ರಸ್ತೆ, ಜೆಎಂಜೆ ಟಾಕೀಸ್ ಹಿಂಭಾಗ, ಕೊಪ್ಪ 577126.

**<u>ಆರೋಪಣೆ</u>**

ಆರೋಪಿಯಾದ ನೀವು ಪಿರ್ಯಾದುದಾರರಿಂದ ಪಡೆದುಕೊಂಡ ಸಾಲವನ್ನು ತೀರುವಳಿ ಮಾಡುವ ಸಲುವಾಗಿ ನೀವು ನಿಮ್ಮ ಬಾಬ್ತು ಅವರಿಗೆ ಚೆಕ್ ನಂ. 329268, ದಿನಾಂಕ 04.10.2023 ನ್ನು ನಮೂದಿಸಿದ ವಿಜಯ ಬ್ಯಾಂಕ್ (ಬ್ಯಾಂಕ್ ಆಪ್ ಬರೋಡಾ), ಕೊಪ್ಪ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಶಾಖೆಗೆ ಹಾಜರುಪಸಿದಾಗ **"Drawers Signature differs from specimen recorded us and insufficient funds** "ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 09.10.2023 ರಂತೆ ವಕೀಲರ ಮುಖಾಂತರ ನೋಟೀಸು ನೀಡಿದ್ದು, ಸದರಿ ನೋಟಿಸು ದಿನಾಂಕ 20.10.2023 ರಂದು "**Addressee is absent intimation delivered not claimed hence returned to sender" ಎಂಬುದಾಗಿದ್ದು,** ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?
ಉತ್ತರಃ ತಿಳಿಯಿತು

ಪ್ರಶ್ನೆ 2ಃ-	ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ	ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.

ದಿನಾಂಕ 30.10.2025

ಸಹಿ/- 30.10.2025.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಪ್ಪ